# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002**

ಜಂಟಿ ನಿರ್ದೇಶಕರು (ನಗರ ಯೋಜನೆ–ಉತ್ತರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನಂ. CC/13/19-20
ದಿನಾಂಕ: 08/5/19

ಸಂಖ್ಯೆ: BBMP/Addl.Dir/JD NORTH/0046/2016-17 ದಿನಾಂಕ: 08-05-2019

## ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ)

ವಿಷಯ: ಆಸ್ತಿ ಖಾತಾ ಸಂಖ್ಯೆ: 43, ಸರ್ವೆ ನಂ. 49/2, 48/4ಎ, 48/4ಬಿ, 48/3, 48/6, 48/1 & 48/5, ವಾರ್ಡ್ ನಂ. 25, ಕ್ಯಾಲಸನಹಳ್ಳಿ ವಿಲೇಜ್, ಹೊರಮಾವು ಉಪವಿಭಾಗ, ಮಹದೇವಪುರ ವಲಯ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ಬಿಲ್ಡಿಂಗ್ – 2 ರ ವಿಂಗ್ – ಜೆ, ಕೆ, ಎಲ್ ಮತ್ತು ಎಂ ರಲ್ಲಿ 2 ತಳ + ನೆಲ + ಮೇಲಿನ 19 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JDNORTH/LP/0046/2016-17 ರಂತೆ ದಿನಾಂಕ: 09-02-2018.
2) ತಮ್ಮ ಮನವಿ ಪತ್ರ ದಿನಾಂಕ: 16-03-2019.

* * * * * * *

ಆಸ್ತಿ ಖಾತಾ ಸಂಖ್ಯೆ: 43, ಸರ್ವೆ ನಂ. 49/2, 48/4ಎ, 48/4ಬಿ, 48/3, 48/6, 48/1 & 48/5, ವಾರ್ಡ್ ನಂ. 25, ಕ್ಯಾಲಸನಹಳ್ಳಿ ವಿಲೇಜ್, ಹೊರಮಾವು ಉಪವಿಭಾಗ, ಮಹದೇವಪುರ ವಲಯ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು, ಇಲ್ಲಿ ಬಿಲ್ಡಿಂಗ್ – 1 (ವಿಂಗ್ –"ಎ" ರಿಂದ "ಇ" ವರೆಗೆ) & ಬಿಲ್ಡಿಂಗ್ – 2 (ವಿಂಗ್ – "ಎಫ್" ರಿಂದ "ಎಂ" ವರೆಗೆ) ರಲ್ಲಿ 2 ತಳ + ನೆಲ + ಮೇಲಿನ 19 ಅಂತಸ್ತುಗಳಲ್ಲಿ 890 ಘಟಕಗಳು ಮತ್ತು 124 EWS ಘಟಕಗಳನ್ನೊಳಗೊಂಡಂತೆ (124 EWS ಘಟಕಗಳನ್ನು ಬ್ಲಾಕ್ –2 ಕಟ್ಟಡದಲ್ಲಿ ಅಳವಡಿಸಲಾಗಿದೆ) ಒಟ್ಟಾರೆ 1014 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಂಖ್ಯೆ: ಬೆಂಅಪ್ರಾ/ನಯೋಸ/ಡಿಎಲ್‌ಪಿ–34/2015–16/1340/2017–18, ದಿನಾಂಕ: 17–10–2017 ರಂದು ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆಯನ್ನು ಪಡೆದುಕೊಂಡಿರುತ್ತಾರೆ. ತದನಂತರ, ಸ್ವತ್ತಿನಲ್ಲಿ ಬಿಲ್ಡಿಂಗ್ – 1 (ವಿಂಗ್ – "ಎ" ರಿಂದ "ಇ" ವರೆಗೆ) & ಬಿಲ್ಡಿಂಗ್ – 2 (ವಿಂಗ್ – "ಎಫ್" ರಿಂದ "ಎಂ" ವರೆಗೆ) ರಲ್ಲಿ 2 ತಳ + ನೆಲ + ಮೇಲಿನ 19 ಅಂತಸ್ತುಗಳ 876 + 124 EWS ಒಟ್ಟಾರೆ 1000 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ಉಲ್ಲೇಖ (1) ರಂತೆ ಈ ಕಛೇರಿಯಿಂದ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಸದರಿ ಬಿಲ್ಡಿಂಗ್ – 2 ರ ವಿಂಗ್ – ಜೆ, ಕೆ, ಎಲ್ ಮತ್ತು ಎಂ ರಲ್ಲಿ 2 ತಳ + ನೆಲ + ಮೇಲಿನ 19 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಾಣ ಪ್ರಾರಂಭಿಸಿದ್ದು, ಆರ್.ಸಿ.ಸಿ. ಸ್ಥಂಭಗಳನ್ನು ನಿರ್ಮಿಸಿರುವುದನ್ನು ಪರಿವೀಕ್ಷಿಸಲಾಗಿದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ನೀಡುವ ಪ್ರಸ್ತಾವನೆಗೆ ದಿನಾಂಕ: 02–05–2019 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರದ (ಭಾಗಶಃ) ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರದ ಶುಲ್ಕದೊಂದಿಗೆ ನೆಲಬಾಡಿಗೆ ಶುಲ್ಕದ ಜಿ.ಎಸ್.ಟಿ. ಸೇರಿ ಒಟ್ಟು ರೂ. 16,77,000/– ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000055 ದಿನಾಂಕ: 08–05–2019 ರಂದು ಸಂದಾಯ ಮಾಡಿರುವುದರಿಂದ, ಸದರಿ ಬಿಲ್ಡಿಂಗ್ – 2 ರ ವಿಂಗ್ – ಜೆ, ಕೆ, ಎಲ್ ಮತ್ತು ಎಂ ರಲ್ಲಿ 2 ತಳ + ನೆಲ + ಮೇಲಿನ 19 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು (ಭಾಗಶಃ) ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ನಕ್ಷೆ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.
4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
5. ಮಂಜೂರಾತಿ ನಕ್ಷೆಯನ್ವಯ ಬಿಲ್ಡಿಂಗ್ - 1 ರ ವಿಂಗ್ - ಎ ರಿಂದ ಇ ಮತ್ತು ಬಿಲ್ಡಿಂಗ್ - 2 ರ ವಿಂಗ್ ಎಫ್ ರಿಂದ ಐ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.
6. ವಿವಿಧ ಇಲಾಖೆಗಳಿಂದ ನೀಡಲಾಗಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಷರತ್ತಿಗಳಿಗೆ ಬದ್ಧರಾಗಿರತಕ್ಕದ್ದು.
7. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ಮತ್ತು ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.

ಸಹಿ /-

ಜಂಟಿ ನಿರ್ದೇಶಕರು (ನಗರ ಯೋಜನೆ -ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಮೆ॥ ರೋಹನ್ ಬಿಲ್ಡರ್ಸ್ ರವರ ಪರವಾಗಿ ಪಾಲುದಾರರಾದ
ಶ್ರೀ.ಸುಹಾಸ್ ಕುಶಾಲ್‌ಚಂದ್ ಲುನ್ಕಾಡ್ ಜಿ.ಪಿ.ಎ.ದಾರರು
ಶ್ರೀ ಕೆ. ಬಾಲರಾಜ್ ಮತ್ತು ಇತರರು ಖಾತಾದಾರರು
# 1147, 3ನೇ ಮಹಡಿ, ಕೆ.ಪಿ.ಐಕಾನ್ ಬಿಲ್ಡಿಂಗ್,
12ನೇ ಮುಖ್ಯ ರಸ್ತೆ, ಹೆಚ್.ಎ.ಎಲ್ 2ನೇ ಹಂತ,
ಇಂದಿರಾನಗರ, ಬೆಂಗಳೂರು- 560 008.

**ಪ್ರತಿಯನ್ನು:**

1. ಕಾರ್ಯಪಾಲಕ ಅಭಿಯಂತರರು (ಕೆ.ಆರ್.ಪುರಂ ವಲಯ) / ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು ಉಪ-ವಿಭಾಗ) ರವರಿಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.

B.R. Muddaki 08/5/19

ಜಂಟಿ ನಿರ್ದೇಶಕರು (ನಗರ ಯೋಜನೆ -ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

8/5/19 8/5 8/5